

‘ರಾಯರ ಸೊಸೆ’ ಚಿತ್ರ ಪ್ರದರ್ಶನದ ಸಮಯದ ಚಹಾಕೂಟದಲ್ಲಿ ನಟರಾದ ಬಾಲಕೃಷ್ಣ, ರಾಜ್‌ಕುಮಾರ್ (ಹಿಂದೆ ನಿಂತಿರುವವರು ಎಂ.ಪಿ. ಬಸವರಾಜ್) ಜಿ.ವಿ. ಅಯ್ಯರ್, ನರಸಿಂಹರಾಜು. ಪಕ್ಕದಲ್ಲಿರುವವರು ನಮ್ಮೂರಿನ ಇನ್ನೊಬ್ಬ ಚಿತ್ರ ಪ್ರದರ್ಶಕರಾಗಿದ್ದ ಷರೀಫ್ ಸಾಹೇಬರು. ಚಿತ್ರದಲ್ಲಿರುವ ಪೇಟಧಾರಿ ‘ಪಿಕ್ಚರ್ ಪ್ಯಾಲೆಸ್’ ಮಾಲೀಕರಾಗಿದ್ದ ನನ್ನ ತಂದೆ ಎಂ.ಆರ್. ಪುಟ್ಟಸ್ವಾಮಿ ಅಯ್ಯನವರು, ಪಕ್ಕದಲ್ಲಿ ಹಾಸನದ ಹೆಸರಾಂತ ವಕೀಲರಾಗಿದ್ದ ಬಿ.ಎಸ್. ರಾಮಸ್ವಾಮಿಯವರು.

ಇಂದಿನವರೆಗಿಂತ ಮೇಲುಗೈಯಾಗಿದ್ದರು. ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ರಾಜ್‌ಕುಮಾರ್ ಮುಂತಾದವರು ಸ್ಥಾಪಿಸಿದ ‘ಚಲನಚಿತ್ರ ಕಲಾವಿದರ ಸಂಘ’ ಡಿಸೆಂಬರ್‌ನಲ್ಲಿ (1958ನೇ ಇಸವಿ ಇರಬೇಕು) ಹಾಸನದ ಜಾತ್ರೆಗೆ ನಾಟಕವಾಡಲು ಬಂದಾಗ ಇದೇ ಸಮಯದಲ್ಲಿ ನಟಿ ಪಂಢರಿಬಾಯಿಯವರು ನಿರ್ಮಿಸಿದ ‘ರಾಯರ ಸೊಸೆ’ ಚಲನಚಿತ್ರ ಹಾಸನದಲ್ಲಿ ನಮ್ಮ ತಂದೆ ಎಂ.ಆರ್. ಪುಟ್ಟಸ್ವಾಮಯ್ಯನವರು ನಿರ್ಮಿಸಿದ ‘ಪಿಕ್ಚರ್ ಪ್ಯಾಲೆಸ್’ ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ಆ ಚಿತ್ರದ ಹೆಗ್ಗಳಿಕೆ ಎಂದರೆ ರಾಜ್‌ಕುಮಾರ್ ಅವರು ಪ್ರಪ್ರಥಮವಾಗಿ ಸಾಮಾಜಿಕ ಚಿತ್ರದಲ್ಲಿ ನಾಯಕನ ಪಾತ್ರ ವಹಿಸಿದ್ದರು.

ಆಗ ನಮ್ಮಲ್ಲಿ ಒಂದು ಪದ್ಧತಿ ಇತ್ತು. ನಮ್ಮೂರಿಗೆ ಕನ್ನಡದ ನಟನಟಿಯರು ಬಂದಾಗ ಅವರನ್ನು ನಮ್ಮ ಸಿನಿಮಾ ಥಿಯೇಟರ್‌ಗೆ ಆಹ್ವಾನಿಸಿ ಸನ್ಮಾನಿಸುವುದು ಮತ್ತು ಪ್ರೇಕ್ಷಕರಿಗೆ ತಾವು ನೋಡುತ್ತಿರುವ ಚಿತ್ರದ ಪಾತ್ರವರ್ಗದವರನ್ನು ಸಾಕ್ಷಾತ್ ನೋಡುವ ಅವಕಾಶ ಒದಗಿಸುವುದು. ಅದರಂತೆ ನನ್ನ ತಂದೆಯವರು ರಾಜ್‌ಕುಮಾರ್, ಬಾಲಕೃಷ್ಣ ನರಸಿಂಹರಾಜು ಇನ್ನಿತರ ನಟರನ್ನೂ, ‘ರಾಯರ ಸೊಸೆ’ ಚಿತ್ರದ ನಿರ್ಮಾಪಕಿ ಪಂಢರಿಬಾಯಿಯವರನ್ನು ಆಹ್ವಾನಿಸಿ ಒಂದು ಚಹಾಕೂಟವನ್ನು ಏರ್ಪಡಿಸಿದ್ದರು. ಸಿನಿಮಾಕ್ಕೆ ಮಧ್ಯ ವಿರಾಮ ಕೊಟ್ಟಾಗ ಪ್ರೇಕ್ಷಕರ ಮುಂದೆ ಏರ್ಪಡಿಸಿರುತ್ತಿದ್ದ ವೇದಿಕೆಗೆ ಪಂಢರಿಬಾಯಿ, ರಾಜ್‌ಕುಮಾರ್, ಬಾಲಕೃಷ್ಣ ಮುಂತಾದವರನ್ನು ಕರೆತಂದಾಗ ಪ್ರೇಕ್ಷಕರ ಚಪ್ಪಾಳೆ, ಶಿಳ್ಳೆ, ಚಿತ್ರಮಂದಿರದ ಚಾವಣಿಯನ್ನು ಮುಟ್ಟಿತು. ನಟರನ್ನು ಒಬ್ಬೊಬ್ಬರನ್ನಾಗಿ ಪರಿಚಯಿಸಿ ತಂದೆಯವರು ಅವರಿಗೆ ಹೂವಿನಹಾರ ಹಾಕಿ ಸನ್ಮಾನಿಸಿದರು. ತಮ್ಮ ಸಿನಿಮಾದ ಆರಾಧ್ಯದೇವತೆಗಳನ್ನು ನೋಡಿ ಬೆರಗಾದ ನೋಡುಗರನ್ನು ಕುರಿತು ನೆಚ್ಚಿನ ನಟರು ಒಂದೆರಡು ಮಾತುಗಳನ್ನಾಡಿ ಕೃತಜ್ಞತೆ ಅರ್ಪಿಸಿದ ನಂತರ ಚಿತ್ರ ಮುಂದುವರಿಯಿತು.

ಗೋಕಾಕ್ ಚಳವಳಿಯಲ್ಲಿ ರಾಜ್‌ಕುಮಾರ್ ಅವರು ಪ್ರಮುಖ ಭಾಗವಹಿಸಿದ್ದರ ನೆನಪಿನ ಪ್ರಸ್ತಾಪ ಈಗಲೂ ಆಗಾಗ ನಡೆಯುತ್ತದೆ. ಆದರೆ ಅರವತ್ತರ ದಶಕದಲ್ಲೇ ಕನ್ನಡದ ಹಿರಿಯ, ಕಿರಿಯ ನಟನಟಿಯರು ಸಾಮಾಜಿಕ ಕಾರಣಗಳಿಗಾಗಿ ‘ರಸಮಂಜರಿ’ ಎಂಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರದರ್ಶಿಸಿ ನಿಧಿ ಸಂಗ್ರಹ ಮಾಡಿದ್ದಾರೆ. ‘ಪ್ರಜಾವಾಣಿ’ ಪತ್ರಿಕೆಯ ಪರಿಕಲ್ಪನೆಯಾದ, ‘ಪ್ರವಾಹ ಸಂತ್ರಸ್ತರ ನಿಧಿ’ ಸಂಗ್ರಹದ ಸಲುವಾಗಿ ರಾಜ್‌ಕುಮಾರ್, ಲೀಲಾವತಿ, ರಾಜಾಶಂಕರ್ ಇನ್ನಿತರ ಕಲಾವಿದರು ಲಾರಿಯಲ್ಲೇ ನಿಂತು ಜನರನ್ನು ಸಮೀಪಿಸಿ ಹಣ ಸಂಗ್ರಹಿಸಿದ ಸಂದರ್ಭದಲ್ಲಿ ಹಾಸನದ ಟಿ.ಬಿ.ಯಲ್ಲಿ ಲೀಲಾವತಿಯವರು ಸುಸ್ತಾಗಿ ಕುಳಿತು ಕುರ್ಚಿಯಲ್ಲೇ ನಿದ್ರಿಸಿದ ದೃಶ್ಯ ಇನ್ನೂ ನನ್ನ ಕಣ್ಣ ಮುಂದೆ ಇದೆ. ಅಂದು ಅವರಿಗಾಗಿ ಊಟೋಪಚಾರದ ಜವಾಬ್ದಾರಿಯನ್ನು ನನ್ನ ಅಣ್ಣ ಎಂ.ಪಿ. ಬಸವರಾಜ್ ನಿರ್ವಹಿಸಿದ್ದರು.

ಅಂದಿನ ಕಲಾವಿದರ ಹಾಗೂ ಸಾರ್ವಜನಿಕರ ಬದ್ಧತೆಗೆ ಅವರು ಜನರೊಂದಿಗೆ ಬೆರೆಯುತ್ತಿದ್ದ ಘಟನೆಗಳನ್ನು ನೆನಪಿಸಿಕೊಳ್ಳಬಹುದು. ಬಹುಶಃ ಈ ಹೃದಯ ಸ್ಪಂದನ–ಸಂವಾದದ ಕಾರಣದಿಂದಲೇ ಇರಬೇಕು, ಅಂದಿನ ಕಲಾವಿದರು ಹಾಗೂ ಅವರು ನಟಿಸಿದ ಸಿನಿಮಾಗಳು ಕನ್ನಡ ಸಂಸ್ಕೃತಿಯ ಭಾಗವಾದರು; ರಾಜ್‌ಕುಮಾರ್ ಕನ್ನಡದ ದಂತಕಥೆಗಳಲ್ಲೊಂದಾಗಿ ಜನಮನದಲ್ಲಿ ಉಳಿದರು. ಆದರೆ, ಇಂದಿನ ಸಿನಿಮಾ ಕೇವಲ ರಂಜನೆಯ ಮಾಧ್ಯಮವಾಗಿಯಷ್ಟೇ ಉಳಿದಿದೆ. ನಾಡಿನ ತವಕ ತಲ್ಲಣಗಳಿಗೂ ತಮಗೂ ಸಂಬಂಧವಿಲ್ಲವೆನ್ನುವಂತೆ ಕಲಾವಿದರು ತಮ್ಮ ಪಾಡಿಗೆ ತಾವಿರುತ್ತಾರೆ. ■



1950ರ ದಶಕದಲ್ಲಿ ಹಾಸನದ ‘ಪಿಕ್ಚರ್ ಪ್ಯಾಲೆಸ್’ ಚಿತ್ರಮಂದಿರದಲ್ಲಿ ಪಂಢರಿಬಾಯಿಯವರ ನಿರ್ಮಾಣದ ‘ರಾಯರ ಸೊಸೆ’ ಸಿನಿಮಾ ಪ್ರದರ್ಶನಗೊಂಡಾಗಿನ ಭಾವಚಿತ್ರ. ಚಿತ್ರದಲ್ಲಿ ಪಂಢರಿಬಾಯಿಯವರ ಪಕ್ಕದಲ್ಲಿ ಮಫ್ಲರ್ ಧರಿಸಿರುವವರು ಅವರ ತಂದೆ, ಪಕ್ಕದಲ್ಲಿ ಬಿಳಿ ಜುಬ್ಬಾಧಾರಿ ಪಂಢರಿಬಾಯಿಅಣ್ಣ ವಿಮಲಾನಂದದಾಸ್, ಇವರಿಬ್ಬರ ಮಧ್ಯೆ ನನ್ನ ಅಣ್ಣ ಎಂ.ಪಿ. ಬಸವರಾಜ್.